ಒ.ಎಸ್.  - 34/2020

ಪಿ.ಡಬ್ಲ್ಯು - 01

**ದಿನಾಂಕ     26-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ  ವಕೀಲರಿಂದಃ**

ಐಟಂ ನಂ 5 ರ ಒಟ್ಟು ವಿಸ್ತೀರ್ಣ 3 ಎಕ್ರೆ .  ಅದರ ಸರ್ವೇ ನಂ 13/5 . ಅದು ಗಾಣಕಳ್ಳೂರು ಗ್ರಾಮ , ಕೆಂಗೇರಿ ಹೋಬಳಿಯಲ್ಲಿ ಇರುತ್ತದೆ.  ನಿಪಿ 66 ಕ್ರಯಪತ್ರವನ್ನು ನಾನು ಒಪ್ಪುತ್ತೇನೆ . ಸಾಕ್ಷಿ ಮುಂದುವರಿದು ಅದರಲ್ಲಿ ಕಾಣಿಸಿರುವ ಮೊತ್ತವನ್ನು ನಾನು ಒಪ್ಪುವುದಿಲ್ಲ . ನಿಪಿ 66 ಕ್ರಯಪತ್ರ ನನ್ನ ಅಣ್ಣನ ಹೆಸರಿನಲ್ಲಿ ಅಗಿದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಅದು ನಮ್ಮೆಲ್ಲರ ಪರವಾಗಿ ಕುಟುಂಬದ ಹಣದಿಂದ ನನ್ನ ಅಣ್ಣನ ಹೆಸನರಿಲ್ಲಿ ತಾತ್ಕಾಲಿಕವಾಗಿ ಖರೀದಿಸಿದ್ದೇವೆ ಎಂದು ತಿಳಿಸಿರುತಾರೆ. ನನ್ನ  ಪ್ರಕಾರ ನಿಪಿ 66 ತಾತ್ಕಾಲಿಕ ದಾಖಲೆ. ಸಾಕ್ಷಿ ಮುಂದುವರಿದು ಖರೀದಿಸಿದ 6 ತಿಂಗಳ ನಂತರ 3 ಜನರ ಹೆಸರಿಗೆ ಮಾಡೋಣ ಎಂದು ಹೇಳಿದ್ದರು. ನನ್ನ ತಂದೆ 3 ಜನರ ಹೆಸರಿಗೆ ಖರೀದಿಸ ಬೇಕೆಂದು ಹೇಳಿದ್ದರು, ಆದರೇ ಆದಾಯ ತೆರಿಗೆ ಇಲಾಖೆಯಿಂದ ಸಮಸ್ಯೆ ಆಗುತ್ತದೆ ಎಂದು ಒಂದನೇ ಪ್ರತಿವಾದಿ ನನ್ನ ಅಣ್ಣನ ಹೆಸರಿನಲ್ಲಿ ಖರೀದಿಸಲಾಯಿತು. ಆ ಸಮಯದಲ್ಲಿ ನನ್ನ ತಂದೆ, ತಾಯಿ ಮತ್ತು ನಾನು ಇದ್ದೆವು.  ನಿಮ್ಮ ಅಣ್ಣ ಒಂದನೇ ಪ್ರತಿವಾದಿ 3 ಜನರ ಹೆಸರಿಗೆ ಮಾಡಿಕೊಡುವುದಾಗಿ promise ಮಾಡಿದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ತಿಳಿಸಿ ಮುಂದುವರಿದು ಕುಟುಂಬದ ಹಣದಿಂದ ತೆಗೆದುಕೊಂಡಿರುವುದರಿಂದ ನಮಗೆ ಎಲ್ಲರಿಗೂ ಹಕ್ಕು ಇದೆ ಎಂದು ತಿಳಿಸಿರುತ್ತಾರೆ .  ಒಂದನೇ ಪ್ರತಿವಾದಿ ನನ್ನ ಅಣ್ಣ ಐಟಂ ನಂ 5 ರ ಸ್ವತ್ತನ್ನು 3 ಜನರ ಹೆಸರಿಗೆ ಮಾಡಿಕೊಡುವುದಾಗಿ ಹೇಳಿದ್ದರು ಎಂದು ನನ್ನ ವಾದಪತ್ರದಲ್ಲಿ ಮತ್ತು ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ, ಆದರೇ ನಮ್ಮ  ವಕೀಲರಿಗೆ ಹೇಳಿರುತ್ತೇನೆ . ಐಟಂ ನಂ 5 ರ ಸ್ವತ್ತನ್ನುಖರೀದಿ ಮಾಡುವಾಗ ಒಂದನೇ ಪ್ರತಿವಾದಿ ಆತನ ಬ್ಯಾಂಕ್ ಖಾತೆ ಇರುವ ಬ್ಯಾಂಕ್ ಆಫ್ ಬರೋಡಾ ಖಾತೆಯಿಂದ

ತಲಾ 9 ಲಕ್ಷದಂತೆ 15 ಡಿಡಿಗಳನ್ನು ಮಾರಾಟಗಾರರಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿ ಕುಟುಂಬದ ಹಣವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು. ಆದ್ದರಿಂದ ಷದ್ರಿ ಕುಟುಂಬದ ಹಣವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನ ಖಾತೆಯಿಂದ ಡಿಡಿ ಕೊಡಲಾಗಿದೆ. ಸಾಕ್ಷಿ ಪುನಃ ಮುಂದುವರಿದು 1 ಕೋಟಿ 35 ಲಕ್ಷ ಎಂದು ದಾಖಲೆಯಲ್ಲಿ ಕಾಣಿಸಲಾಗಿದೆ, ಆದರೇ 2 ಕೋಟಿ ಕಪ್ಪು ಹಣವನ್ನು ಕೊಡಲಾಗಿದೆ ಎಂದು ತಿಳಿಸಿರುತ್ತಾರೆ . 1 ಕೋಟಿ 35 ಲಕ್ಷ ವನ್ನು ಐಟಂ ನಂ 5 ರ ಸ್ವತ್ತನ್ನು ಖರೀದಿಸಲು ಕೊಟ್ಟಿದ್ದಲ್ಲದೇ, 2 ಕೋಟಿ ಕಪ್ಪು ಹಣವನ್ನು ಕೊಡಲಾಗಿದೆ ಎಂದು ನನ್ನ ವಾದಪತ್ರದಲ್ಲಿ ಮತ್ತು ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಕಾಣಿಸಿಲ್ಲ. 2 ಕೋಟಿ ಕಪ್ಪು ಹಣವನ್ನು ಕೊಡಲಾಗಿದೆ ಎಂದು ಇದೇ ಮೊದಲ ಬಾರಿಗೆ ಹೇಳುತಿದೀರಿ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಗ ಹೇಳಲು ಅವಕಾಶ ಇರಲಿಲ್ಲ ನಾವು ನಮ್ಮ ವಕೀಲರ ಬಳಿ ದಾವೆ ಹಾಕುವಾಗ ಹೇಳಿರುತ್ತೇನೆ ಎಂದು ತಿಳಿಸಿರುತ್ತಾರೆ . ಈಗ ನಾನು ಹೇಳಿದ 2 ಕೋಟಿ ಕಪ್ಪು ಹಣವನ್ನು ಕೊಡಲಾಗಿದೆ ಮತ್ತು ಕುಟುಂಬದ ಹಣದಿಂದ ಕೊಡಲಾಗಿದೆ ಎನ್ನುವ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಖರೀದಿಸಿದ್ದೆ ದಾಖಲೆ ಎಂದು ತಿಳಿಸಿರುತ್ತಾರೆ. ಮುಂದುವರಿದು 1 ಕೋಟಿ 35 ಲಕ್ಷಕ್ಕೆ ಬೆಂಗಳೂರಿನಲ್ಲಿ 3 ಎಕ್ರೆ ಜಾಗ ಎಲ್ಲಿ ಸಿಗುತ್ತದೆ ಎಂದು ತಿಳಿಸಿರುತ್ತಾರೆ. 1 ಕೋಟಿ 35 ಲಕ್ಷ ಹಣ ಒಂದನೇ ಪ್ರತಿವಾದಿ ಖಾತೆಗೆ ಯಾವ ಮೂಲಗಳಿಂದ ಜಮೆ ಆಯಿತು ಎಂದು ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ಅಪಾರ್ಟ್‌ಮೆಂಟ್ ನ flat ಗಳನ್ನು ಮಾರಾಟ ಮಾಡಿದ ಹಣ ಮತ್ತು ಎಲ್ಲವನ್ನು ಒಂದನೇ ಪ್ರತಿವಾದಿಯೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . 23-03-2006 ರಂದು ಅವರ ಖಾತೆಯಲ್ಲಿ 1 ಕೋಟಿ 47 ಲಕ್ಷ ಹಣ ಜಮೆ ಆಗಿತ್ತು ಎಂದರೆ ನಾನು ನೋಡಿಲ್ಲ ಎಂದು ತಿಳಿಸಿರುತ್ತಾರೆ. 1 ಕೋಟಿ 35 ಲಕ್ಷ ಹಣ ವನ್ನು ಸೇರಿಸಲು ಯಾರಿಂದ ಎಷ್ಟು ಸಾಲ ಪಡೆಯಲಾಯಿತು ಯಾವ ಯಾವ ಮೂಲಗಳಿಂದ ಹಣ ಬಂದಿತು ಯಾರಿಂದ ಎಷ್ಟು

ದಾನ ಬಂದಿತು ಎಂಬ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಎಲ್ಲ ವಿವರಗಳನ್ನು ಒಂದನೇ ಪ್ರತಿವಾದಿ ರಿಟನ್ಸ್ ನಲ್ಲಿ ಕಾಣಿಸಿದ್ದಾರೆ ಎಂದರೆ ಸಾಕ್ಷಿ ಸಾಲ ತೆಗೆದುಕೊಳ್ಳುವ ಮತ್ತು ದಾನ ಪಡೆಯುವ ಪ್ರಮೇಯವೇ ಇರಲಿಲ್ಲ ಆದರೇ ಆದಾಯ ತೆರಿಗೆ ಇಲಾಖೆಗೆ ಬಿಳಿ ಹಣ ತೋರಿಸಬೇಕು ಎಂದು ಬೇರೆಯವರಿಗೆ ಹಣ ಕೊಟ್ಟು ಅವರಿಂದ ಸಾಲ ಪಡೆದ ರೀತಿ ಮತ್ತು ದಾನ ಪಡೆದ ರೀತಿ ಕಾಣಿಸಿದ್ದಾರೆ ಎಂದು ತಿಳಿಸಿರುತ್ತಾರೆ . ಎಲ್ಲಾ ದಾಖಲೆಗಳನ್ನು ಆದಾಯ ತೆರಿಗೆ ಇಲಾಖೆಗೆ ಒಂದನೇ ಪ್ರತಿವಾದಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಎಲ್ಲವನ್ನು ಅವರೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಆದಾಯ ತೆರಿಗೆ ಇಲಾಖೆಯವರು ರಿಟನ್ಸ್ನು ಪರಿಶೀಲಿಸಿ ವಿವರವಾದ ಆದೇಶವನ್ನು ಮಾಡಿದ್ದಾರೆ ಎಂದರೆ ಸಾಕ್ಷಿ ನೋಡಿಲ್ಲ ಮಾಡಿರಬಹುದು ಎಂದು ತಿಳಿಸಿರುತ್ತಾರೆ . ಈ ವ್ಯವಹಾರದಲ್ಲಿ 2 ಕೋಟಿ ಕಪ್ಪು ಹಣ ಚಲಾವಣೆ ಆಗಿದೆ ಎಂದು ನಾನು ಆದಾಯ ತೆರಿಗೆ ಇಲಾಖೆಗೆ ದೂರು ಕೊಟ್ಟಿಲ್ಲ ಮತ್ತು ದೂರು ಕೊಡುವ ಅವಶ್ಯಕತೆ ಬರಲಿಲ್ಲ ಎಂದು ತಿಳಿಸಿರುತಾರೆ . ಆಸ್ತಿ ಖರೀದಿ ಬಗ್ಗೆ ಒಂದನೇ ಪ್ರತಿವಾದಿ 2004 ರಿಂದಲೇ ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆಯನ್ನು ಮಾಡುತಿದ್ದರು ಎಂದರೆ ಸಾಕ್ಷಿ ಕಪ್ಪು ಹಣ ಕೊಟ್ಟು ಬಿಳಿ ಹಣವನ್ನು ತಯಾರು ಮಾಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ನನ್ನ ಅಣ್ಣ ಒಂದನೇ ಪ್ರತಿವಾದಿಗೆ ಉಡುಪಿ ಟೌನ್ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ ಖಾತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆಯಲ್ಲಿ 2004 ರಲ್ಲಿ 38 ಲಕ್ಷ ಜಮೆ ಇತ್ತು ಎಂದರೆ ಸಾಕ್ಷಿ ಅದು ಮನೆಯ ಹಣ ಎಂದು ತಿಳಿಸಿರುತ್ತಾರೆ. ನನ್ನ ಅಕ್ಕ ವಿಜಯಲಕ್ಷ್ಮೀ ರವರ ಗಂಡನ ಅಣ್ಣನ ಹೆಂಡತಿ ವಿಜಯ ರವರು ಉಡುಪಿ ವಿಜಯ ಬ್ಯಾಂಕ್ ಪುತ್ತೂರು ಶಾಖೆಯಲ್ಲಿ 2005-06 ರಲ್ಲಿ ಮ್ಯಾನೇಜರ್ ಆಗಿದ್ದರು ಎಂದರೆ ಸಾಕ್ಷಿ ಉಡುಪಿಯಲ್ಲಿ ಇದ್ದರು ಎಂದು ಗೊತ್ತು ಯಾವ ಶಾಖೆಯಲ್ಲಿ ಮ್ಯಾನೇಜರ್ ಆಗಿದ್ದರು ಎಂದು ಗೊತ್ತಿಲ್ಲ. ಅವರ ಕೋರಿಕೆಯ ಮೇರೆಗೆ ಒಂದನೇ ಪ್ರತಿವಾದಿಯಾದ ನನ್ನ ಅಣ್ಣ 1 ಕೋಟಿ ರೂ ಗಳನ್ನು ಉಡುಪಿ ವಿಜಯ ಬ್ಯಾಂಕ್ ಪುತ್ತೂರು ಶಾಖೆಯಲ್ಲಿ ಠೇವಣಿ

ಇಟ್ಟಿದ್ದರು ಎಂದರೆ ಸಾಕ್ಷಿ ಮನೆಯ ಹಣವನ್ನು ಠೇವಣಿ ಇಟ್ಟಿದ್ದರು ಮತ್ತು ಎಲ್ಲಾ ವ್ಯವಹಾರವನ್ನು ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಕ್ರಯ ಸಾಧನ ಆಗುವವರೆಗೆ ಸದ್ರಿ ಠೇವಣಿ ಬಡ್ಡಿಯ ಹಣ ನನ್ನ ಅಣ್ಣನ ಖಾತೆಗೆ ಜಮೆ ಆಗುತಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಫಾರಂ 16 ಎ ನ್ನು ತೋರಿಸಲಾಗಿ ಸಾಕ್ಷಿ ಮಾಡಿರಬಹುದು ಎಲ್ಲವನ್ನು ನಮ್ಮ ಅಣ್ಣ ನೋಡಿಕೊಳ್ಳುತಿದ್ದರು ಆದರೇ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ 10-09-2004 ರಂದು ಐಸಿಐಸಿ ಬ್ಯಾಂಕ್ ನ ಒಂದನೇ ಪ್ರತಿವಾದಿ ಖಾತೆಗೆ ರೂ 38,28,734/- ಗಳನ್ನು ಒಂದನೇ ಪ್ರತಿವಾದಿ ಚೆಕ್ ನಂ 450092 ರ South Canara District Central Co operative Bank , udupi ಶಾಖೆಯ ಮುಖೇನ ನಾನೇ ಚಲನ್ ನ್ನು ತುಂಬಿಸಿ ಸದ್ರಿ ಚೆಕ್ ನ್ನು ನಾನೇ ತೆಗೆದುಕೊಂಡು ಹೋಗಿ ICIC Bank ಗೆ ಹಾಕಿದ್ದೇನೆ ಎಂದರೆ ಸರಿ. ಸಾಕ್ಷಿ ಕೌಂಟರ್ ಫೈಲ್ ನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 15 ಎಂದು ಗುರುತಿಸಲಾಯಿತು . ಸಾಕ್ಷಿ ಮುಂದುವರಿದು ಅದು ಎಲ್ಲವೂ ನಮ್ಮ ಕುಟುಂಬದ ಹಣ ಒಂದನೇ ಪ್ರತಿವಾದಿ ನನಗೆ ಕುಟುಂಬದ ಹಣವನ್ನು ಬ್ಯಾಂಕ್ ನಲ್ಲಿ ಹಾಕಲು ಮತ್ತು ಚೆಕ್ ಜಮೆ ಮಾಡಲು ಹೇಳುತಿದ್ದರು ಹಾಗೇ ನಾನು ಹಾಕುತಿದ್ದೆ. ನಿಡಿ 15 ರಲ್ಲಿ ಕಾಣಿಸಿರುವ ಚೆಕ್ ಯಾರದು ಎಂದು ನೆನಪಾಗುತ್ತಿಲ್ಲ . ನಿಡಿ 15 ರಲ್ಲಿ ಕಾಣಿಸಿರುವ ಚೆಕ್ ನಮ್ಮ ಕುಟುಬಂದಲ್ಲದವರ ಮೂರನೇ ವ್ಯಕ್ತಿ ನನ್ನ ಅಣ್ಣನಿಗೆ ಕೊಟ್ಟ ಚೆಕ್ ಎಂದರೆ ಸಾಕ್ಷಿ ಕಪ್ಪು ಹಣವನ್ನು ನನ್ನ ಅಣ್ಣ ಕೊಟ್ಟು ಆ ರೀತಿ ಬಿಳಿ ಹಣ ಮಾಡಲು ಚೆಕ್ ಪಡೆಯುತಿದ್ದರು ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ನಿಮ್ಮ ತಂದೆ, ತಾಯಿ, ನಿಮ್ಮ ಮತ್ತು ನಿಮ್ಮ ಮತ್ತೊಬ್ಬ ಸಹೋದರನ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮೆಲ್ಲರ ಖಾತೆಯನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ನಿರ್ವಹಿಸುತಿದ್ದ ಎಂದು ತಿಳಿಸಿರುತ್ತಾರೆ . ಐಟಂ ನಂ 5 ರ ಸ್ವತ್ತು ನಮ್ಮ ಮೂರು ಜನರಿಗೆ ಸೇರಿದಂತಹ ಆಸ್ತಿ

ಎಂದು ಕಂದಾಯ ಇಲಾಖೆಗೆ ಮತ್ತು ಸಂಬಂಧಪಟ್ಟಂತೆ ಯಾವುದೇ ಇಲಾಖೆಗೆ ಹೇಳಿಲ್ಲ ಕಾರಣ ಹೇಳುವ ಅವಕಾಶ ಇರಲಿಲ್ಲ ಎಂದು ತಿಳಿಸಿರುತ್ತಾರೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.